# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ.ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ | : | 270 |
| ಉತ್ತರಿಸಬೇಕಾದ ದಿನಾಂಕ | : | 14.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಕೋಳಿ ಸಾಕಾಣಿಕೆಯನ್ನು ರಾಜ್ಯಾದ್ಯಂತ ರೈತರು ಉಪ ಕಸಬನ್ನಾಗಿ ಹಾಗೂ ಕೆಲವು ರೈತರು ಗರಿಷ್ಠ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ನ್ಯಾಯಾಲಯದ ಆದೇಶ ಸಂಖ್ಯೆ: ILR2000KAR4718, 2000 (6) KARLJ 435 12/01/2000 ರಂತೆ ಕರ್ನಾಟಕ ಉಚ್ಚ ನ್ಯಾಯಾಲಯ ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸಿ, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರ ನಿಯಮ 2 ರನ್ವಯ ತೀರ್ಪು ನೀಡಿದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅವಶ್ಯವಿರುವ ತಿದ್ದುಪಡಿ/ಆದೇಶಗಳನ್ನು ಹೊರಡಿಸಲು ಕೋರಿ ಪ್ರಸ್ತಾವನೆಗಳು ಸದರಿ ಎರಡು ಇಲಾಖೆಗಳಲ್ಲಿ ಬಾಕಿ ಇರುತ್ತವೆ. |
| ಆ) | ಕೋಲಾರ/ಚಿಕ್ಕಬಳ್ಳಾಪುರ ಜಿಲ್ಲೆಯಂತಹ ಕೃಷಿ ಆಧಾರಿತ ಜಿಲ್ಲೆಗಳಲ್ಲಿ ಕೋಳಿ ಸಾಕಾಣಿಕೆಯನ್ನು ಉತ್ತೇಜಿಸಲು ಸರ್ಕಾರ ಯಾವುದಾದರೂ ವಿಶೇಷ ಯೋಜನೆಗಳನ್ನು ರೂಪಿಸಿದೆಯೇ; (ಹಾಗಿದ್ದಲ್ಲಿ, ವಿಶೇಷ ಯೋಜನೆಗಳ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯಾದ್ಯಂತ ಗ್ರಾಮೀಣ ರೈತ ಮಹಿಳೆಯರಿಗೆ 5 ವಾರದ 20 ನಾಟಿ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮ ಅನುಷ್ಠಾನದ ಹಂತದಲ್ಲಿದೆ.<br>ಗ್ರಾಮೀಣ ಪ್ರದೇಶದ ಬಡ ಜನರಿಗೆ ಪಂಜರದ ಜೊತೆಗೆ 22 ವಾರದ ಬಿ.ವಿ 380 ಕೋಳಿಗಳನ್ನು ನೀಡುವ ಯೋಜನೆ ಜಾರಿಯಲ್ಲಿದೆ.<br>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೋಳಿ ಸಾಕಾಣಿಕೆ ಮತ್ತು ಮಾರಾಟಕ್ಕೆ ಪ್ರೋತ್ಸಾಹ ನೀಡಲು 16 ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಮಾಡಲಾಗಿದೆ. |

| | | |
|---|---|---|
| ಇ) | ರೈತರು ಕೋಳಿ ಸಾಕಾಣಿಕೆಯನ್ನು ಮಾಡಲು ವಿಶೇಷ ಬಡ್ಡಿ ದರದಲ್ಲಿ ಸರ್ಕಾರ ಹಾಗೂ ಸಹಕಾರ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವ ಯಾವ ಬ್ಯಾಂಕುಗಳಲ್ಲಿ ರೈತರ ಸಾಲ ಸೌಲಭ್ಯವನ್ನು ಪಡೆಯಬಹುದಾಗಿದೆ; (ವಿವರ ನೀಡುವುದು) | ರೈತರು ಕೋಳಿ ಸಾಕಾಣಿಕೆಯನ್ನು ಮಾಡಲು ವಿಶೇಷ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಪಡೆಯಲು ಯಾವುದೇ ಯೋಜನೆ ಇರುವುದಿಲ್ಲ.<br>ಆದರೆ ಎನ್.ಎಲ್.ಎಂ ಯೋಜನೆಯಡಿ 1000 ದೇಸಿ ಕೋಳಿ ಮಾತೃ ಘಟಕ ಸ್ಥಾಪಿಸಲು ಶೇ.50 ಸಹಾಯಧನ (ಗರಿಷ್ಠ ಸಹಾಯ ಧನ ರೂ.25.00 ಲಕ್ಷಗಳು) ಸೌಲಭ್ಯವಿದೆ. |
| ಈ) | ಕೋಳಿ ಸಾಕಾಣಿಕೆ ಕೇಂದ್ರಗಳಲ್ಲಿ ಕೋಳಿಗಳಿಗೆ ಬರುವ ಕೆಲವು ಖಾಯಿಲೆಗಳನ್ನು ಪರೀಕ್ಷಿಸಲು ಜಿಲ್ಲಾ ಕೇಂದ್ರಗಳಲ್ಲಿ ವ್ಯವಸ್ಥಿತವಾದ ಪ್ರಯೋಗಾಲಯಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು? (ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು ಸಂಸ್ಥೆಯ ಅಧೀನದಲ್ಲಿ ಈ ಕೆಳಕಂಡ ಜಿಲ್ಲಾ ಕೇಂದ್ರಗಳಲ್ಲಿ ಪ್ರಾದೇಶಿಕ ಪ್ರಯೋಗಾಲಯಗಳು ಕಾರ್ಯ ನಿರ್ವಹಿಸುತ್ತಿವೆ(ಇದು ಕೋಳಿ ಸಂಬಂಧಿತ ರೋಗವನ್ನು ಸಹ ವಿಶ್ಲೇಷಿಸಬಹುದು).<br>1) ಕೋಲಾರ, 2) ಮೈಸೂರು, 3) ಶಿವಮೊಗ್ಗ,<br>4) ದಾವಣಗೆರೆ, 5) ಬಳ್ಳಾರಿ, 6) ಕಲಬುರ್ಗಿ,7) ಶಿರಸಿ,<br>8) ಶಿರಾ, 9) ಮಂಗಳೂರು, 10) ಬೀದರ್, 11) ಬೆಳಗಾವಿ,<br>12) ಬಾಗಲಕೋಟೆ,<br>ವಿಜಯಪುರ, ರಾಯಚೂರು, ಕೊಪ್ಪಳ, ಧಾರವಾಡ, ಗದಗ, ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸುವ ಕಾಮಗಾರಿ ಪ್ರಗತಿಯಲ್ಲಿದೆ. |

**ಇ– ಪಸಂಮೀ 193 ಸಲೆವಿ 2022**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು